ಅದೂ ಅಲ್ಲದೆ ನಾವು ಏನು ತಾಲ್ಲೂಕು ಕ್ರೀಡಾಂಗಣಕ್ಕೆ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಬೇಕಾಗಿತ್ತು, 10 ಲಕ್ಷ ಅಲ್ಲದೆ ಪುನಃ ವಿಶೇಷ ಅನುದಾನಕ್ಕೆ 5 ಲಕ್ಷ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಈಗಾಗಲೇ ಪೆವಿಲಿಯನ್ ಮುಗಿಯುವ ಹಂತದಲ್ಲಿ ಇದೆ. ಸನ್ಮಾನ್ಯ ಅಧ್ಯಕ್ಷರೆ ಇದರ ಜೊತೆಗೆ ಮಾನ್ಯ ಸದಸ್ಯರು ಹೇಳಿದರು, ಕ್ರೀಡಾಂಗಣವನ್ನು ಇಂಪ್ರೂವ್ ಮಾಡಬೇಕೆಂದು. ನಾವು ಈಗಾಗಲೇ ಗೌರ್ಮೆಂಟ್ ಆಫ್ ಇಂಡಿಯಾಗೆ ಕೆಲವೊಂದು ಪ್ರಪೋಸಲ್ ಸಲ್ಲಿಸಿದ್ದೇವೆ. ಆ ಒಂದು ಯೋಜನೆಯ ಅಡಿಯಲ್ಲಿ ಹಣ ಬಿಡುಗಡೆ ಆದರೆ ಕ್ರೀಡಾಂಗಣವನ್ನು ಇಂಪ್ರೂವ್ ಮಾಡುವುದಕ್ಕೆ ನಾವು ಕ್ರಮತೆಗೆದುಕೊಳ್ಳುತ್ತೇವೆ.

ವಿಷಯ: ಬೆಂಗಳೂರು-ಮಾಗಡಿ-ಕುಣಿಗಲ್ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವುದು.

517 (4038)

ಶ್ರೀ ಹೆಚ್.ಸಿ.ಬಾಲಕೃಷ್ಣ (ಮಾಗಡಿ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು-ಮಾಗಡಿ-ಕುಣಿಗಲ್ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರಕ್ಕಿದೆಯೇ?

ಆ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಇ) ರಾಜ್ಯ ಹೆದ್ದಾರಿಯನ್ನು ನಿರ್ಮಿಸಲು ಸರ್ಕಾರದಿಂದ ಸ್ಪಷ್ಟವಾದ ಮಾರ್ಗ ಸೂಚಿಯಿದೆಯೇ?

ಈ) ಈ ರಸ್ತೆಯ ಅಭಿವೃದ್ಧಿಗೆ ಸರಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು.)

ಅ) ಇರುವುದಿಲ್ಲ. ಬೆಂಗಳೂರಿನಿಂದ ಮಾಗಡಿಯವರೆಗೆ ರಾಜ್ಯ ಹೆದ್ದಾರಿಯಾಗಿರುತ್ತದೆ. ಹಾಗೂ ಮಾಗಡಿಯಿಂದ ರಾಷ್ಟ್ರೀಯ ಹೆದ್ದಾರಿ-48ಕ್ಕೆ ಸೇರುವುದು ಜಿಲ್ಲಾ ಮುಖ್ಯ ರಸ್ತೆ ಆಗಿದೆ.

ಆ) ಈಗಾಗಲೇ ಮಾಗಡಿಯನ್ನು ರಾಷ್ಟ್ರೀಯ ಹೆದ್ದಾರಿ-40 (ಕಿ.ಮೀ. 47) ಸೋಲೂರು ಬಳಿ ಸಂಪರ್ಕಿಸುವ ರಸ್ತೆ ರಾಜ್ಯ ಹೆದ್ದಾರಿಯಾಗಿದ್ದು, ರಾಷ್ಟ್ರೀಯ ಹೆದ್ದಾರಿ-48ರ ಕಿಮೀ. 57ರಲ್ಲಿ ಸಂಪರ್ಕಿಸುವ ಜಿಲ್ಲಾ ಮುಖ್ಯ ರಸ್ತೆಯನ್ನು ರಾಜ್ಯ ಹೆದ್ದಾರಿಯಾಗಿ ಪರಿವರ್ತಿಸುವ ಯೋಜನೆ ಇರುವುದಿಲ್ಲ.

ಇ) ಇದೆ.

ಈ) ಅನುದಾನದ ಲಭ್ಯತೆಯಂತೆ ಮುಂದಿನ ವರ್ಷಗಳಲ್ಲಿ ಅಭಿವೃದ್ಧಿಯನ್ನು ಪರಿಶೀಲಿಸಲಾಗುವುದು.

ಶ್ರೀ ಹೆಚ್.ಸಿ.ಬಾಲಕೃಷ್ಣ: ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಶ್ನೆಯನ್ನು ಕೇಳಿದ್ದೇನೆ. ಅದೇನೆಂದರೆ, ಮಾಗಡಿ, ಕುಣಿಗಲ್ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಯೋಜನೆ ಸರ್ಕಾರಕ್ಕಿದೆಯೇ ಎಂದು. ಆದರೆ ಸರ್ಕಾರ ಇಲ್ಲ ಎಂದು ಹೇಳಿದೆ. ಇದಕ್ಕೆ ಕಾರಣ ಏನು ಎಂದು ಕೇಳಿದ್ದಕ್ಕೆ, ರಾಷ್ಟ್ರೀಯ ಹೆದ್ದಾರಿ 48ಕ್ಕೆ, 47ನೇ ಕಿ.ಮೀಗೆ ಸೇರುವಂತಹ ರಸ್ತೆ ರಾಷ್ಟ್ರೀಯ ಹೆದ್ದಾರಿ ಆಗಿರುವುದರಿಂದ 57 ಕಿ.ಮೀ. ಸೇರುವಂತಹ ರಸ್ತೆ ರಾಷ್ಟ್ರೀಯ ಹೆದ್ದಾರಿ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ. ದಯಮಾಡಿ ಅದರ ಬಗ್ಗೆ ಒಂದು ಸ್ಪಷ್ಟತೆ ಕೊಡಬೇಕೆಂದು ಕೇಳುತ್ತೇನೆ. ಮತ್ತು ಈ ರಸ್ತೆಯನ್ನು ಅಭಿವೃದ್ಧಿ ಪಡಿಸುತ್ತೀರಾ ಎಂದು ಕೇಳಿದ್ದೇನೆ, ಅದರಲ್ಲಿ ಅನುದಾನದ ಲಭ್ಯತೆಯನ್ನು ಮುಂದಿನ ಅಭಿವೃದ್ಧಿ ಯೋಜನೆಯಲ್ಲಿ ಪರಿಶೀಲಿಸಲಾಗುವುದು ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ದಯಮಾಡಿ ಮಾನ್ಯ ಮಂತ್ರಿಗಳನ್ನು ಕೇಳುವುದು ಇಷ್ಟೇ, ಪರಿಶೀಲಿಸಲಾಗುವುದು ಎಂದು ಹೇಳುವ ಬದಲು ತೆಗೆದುಕೊಳ್ಳಲಾಗುವುದು ಎಂದು ಉತ್ತರ ಏನಾದರೂ ಕೊಡುತ್ತಾರಾ? ಇದರ ಜೊತೆಗೆ ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸುವುದಕ್ಕೆ ಬೇರೆ ಹಣ ಏನಾದರೂ ಇಟ್ಟಿದೆಯಾ? ಹಾಗಾದರೆ ಎಲ್ಲೆಲ್ಲಿ ಹಣ ಖರ್ಚು ಮಾಡಿದೆ. ಆದುದರಿಂದ ದಯಮಾಡಿ ನಮ್ಮ ತಾಲ್ಲೂಕಿಗೆ ಈ ವರ್ಷ ಪೂರ್ತಿ ಹಣವನ್ನು ಬಿಡುಗಡೆ ಮಾಡಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಸಭಾಧ್ಯಕ್ಷರೆ, ಯಾವುದೇ ರಾಜ್ಯ ಹೆದ್ದಾರಿಯನ್ನು ಪರಿವರ್ತನೆ ಮಾಡಬೇಕಾದಾಗ ಭೂ ಸಾರಿಗೆ ಮಂತ್ರಾಲಯದ ಮಾರ್ಗದರ್ಶನದಂತೆ ರಾಜ್ಯ ಹೆದ್ದಾರಿಗಳನ್ನು ನಾವು ಮಾಡಬೇಕಾಗುತ್ತದೆ. ಈ ಜಿಲ್ಲಾ ಹೆದ್ದಾರಿ ಇರುವುದರಿಂದ ರಸ್ತೆ ಜಿಲ್ಲಾ ಕೇಂದ್ರವನ್ನು ಸಂಪರ್ಕಿಸುತ್ತಾ ಇರಬೇಕು. ರಸ್ತೆ ರಾಷ್ಟ್ರೀಯ ಹೆದ್ದಾರಿಯನ್ನಾಗಲಿ, ಅಥವಾ ನೆರೆ ರಾಜ್ಯದ ಹೆದ್ದಾರಿಯನ್ನಾಗಲಿ ಸಂಪರ್ಕಿಸಬೇಕು. ಈ ರೀತಿ ವ್ಯವಸ್ಥಿತವಾಗಿ ಇದ್ದಾಗ ಮಾತ್ರ ಹಾಗೂ ಇದು ಜಿಲ್ಲಾ ಕೇಂದ್ರಗಳಿಗೆ ಸಂಪರ್ಕ ರಸ್ತೆಗಳು ಆಗುತ್ತಾ ಇದ್ದರೆ ಮಾತ್ರ ಅದಕ್ಕೆ ಮಹತ್ವ ಕೊಡಬೇಕಾಗುತ್ತದೆಯೇ ಹೊರತು, ಅವರ ಕೋರಿಕೆ ಏನಾದರೂ ರಾಜ್ಯ ಹೆದ್ದಾರಿ ಆಗಬೇಕು ಎಂದು ಇದ್ದರೆ, ಇವತ್ತು ಹಣಕಾಸಿನ ಲಭ್ಯತೆ ಮೇಲೆ ಮಾಡುವುದಕ್ಕೆ ಆಗುವುದಿಲ್ಲ ಎಂಬುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮುಂದಿನ ವರ್ಷದಲ್ಲಿ ಇದನ್ನು ಯಾವುದಾದರೂ ಯೋಜನೆಗೆ ಸೇರಿಸುವಂತಹ ಕಾರ್ಯಕ್ರಮವನ್ನು ಮಾಡುತ್ತೇವೆ ಎಂದು ಹೇಳುತ್ತೇನೆ.

ಶ್ರೀ ಎಸ್.ಪಿ.ಮುದ್ದಹನುಮೇಗೌಡ: ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಲ್ಲಿ ಒಂದು ಕೋರಿಕೆ. ಅದೇನೆಂದರೆ, ಮಂಗಳೂರಿನಿಂದ ಬೆಂಗಳೂರಿಗೆ ಇರುವಂತಹ ರಾಜ್ಯ ಹೆದ್ದಾರಿ ಏನಿದೆ, ಅಲ್ಲಿ ಸುಮಾರು ನಾನೂರು, ಐನೂರು ಆಯಿಲ್ ಟ್ಯಾಂಕರ್‌ಗಳು ಓಡಾಡುವುದು ಈಗ ಹೊಸದಾಗಿ ಪ್ರಾರಂಭವಾಗಿದೆ, ಇದರಿಂದ ಆ ರಸ್ತೆಯಲ್ಲಿ ಓಡಾಡುವುದೇ ತುಂಬಾ ಕಷ್ಟವಾಗಿದೆ. ಆದ್ದರಿಂದ ಇದನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಬಹುದು ಎಂದರೆ, ತಾವು ದಯಮಾಡಿ ಇದನ್ನು ಮಾಗಡಿ-ಕುಣಿಗಲ್ ರಸ್ತೆ ಏನಿದೆ, ಇದನ್ನು ರಾಜ್ಯ ಹೆದ್ದಾರಿಯಾಗಿ ಪರಿವರ್ತನೆ ಮಾಡುವಂತಹ ಯಾವುದಾದರೂ ಒಂದು ಯೋಜನೆಯನ್ನು ದಯಮಾಡಿ ತಾವು ರೂಪಿಸಿ. ಏಕೆಂದರೆ ಈಗ ಲ್ಯಾಂಡ್ ಅಕ್ವಿಸಿಷನ್ ಸಮಸ್ಯೆ ಇಲ್ಲ. ಕೆಲವು ಹಣಕಾಸಿನ ತೊಂದರೆ ಇದೆ ಎಂದು ತಾವು ಹೇಳಿದಿರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ದಯಮಾಡಿ ಇದರ ಬಗ್ಗೆ ದೂರಾಲೋಚನೆ ಇಟ್ಟುಕೊಂಡು ಈ ಒಂದು ಯೋಜನೆಯನ್ನು ಮಾಡಿದರೆ ಬಹಳ ಅನುಕೂಲವಾಗುತ್ತದೆ. ಮತ್ತು ರಾಷ್ಟ್ರೀಯ ಹೆದ್ದಾರಿ 48ಕ್ಕೆ ಇರುವಂತಹ ಪ್ರೇಷರ್ ಏನಿದೆ, ಅದನ್ನು ಕಡಿಮೆ ಮಾಡಬಹುದು. ಆದಕಾರಣ ತಾವು ದಯಮಾಡಿ ಇದನ್ನು ಗಂಭೀರವಾಗಿ ತೆಗೆದುಕೊಂಡು ಈ ಯೋಜನೆಯನ್ನು ರೂಪಿಸಬೇಕು ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಸನ್ಮಾನ್ಯ ಸದಸ್ಯರ ಸಲಹೆಯನ್ನು ತೀವ್ರವಾಗಿ ಗಮನಿಸುತ್ತೇನೆ.

ಅಧ್ಯಕ್ಷರು: ರಸ್ತೆ ಮೇಲೆ ಓಡಾಡುವಂತಹ ವಾಹನಗಳು ಮ್ಯಾಕ್ಸಿಮಂ ಎಷ್ಟು ಲೋಡ್ ಇರಬೇಕು ಎಂದು ನಿಯಮ ಏನಾದರು ಇದೆಯೇ?

ಶ್ರೀ ಸಿ.ಎಂ.ಉದಾಸಿ: ಹೌದು. ರಾಷ್ಟ್ರೀಯ ಹೆದ್ದಾರಿ ರಸ್ತೆಗಳ ನಿರ್ಮಾಣ ಮಾಡುವಾಗ ಆ ರಸ್ತೆ 10 ಟನ್ ಬಾರ ಹೊರುವುದಕ್ಕೆ ಸಾಮರ್ಥ್ಯ ಇರುವಂತೆ ಆ ರಸ್ತೆಯನ್ನು ನಿರ್ಮಾಣ ಮಾಡಿರುತ್ತೇವೆ. ಆದರೆ ಈಗ ಏನಾಗಿದೆ ಅಂದರೆ 15,20 ಟನ್ ಭಾರ ಹೊರುವಂತಹ ವಾಹನಗಳು ಓಡಾಡುತ್ತಿರುವುದರಿಂದ....

ಅಧ್ಯಕ್ಷರು: ಅದನ್ನೇ ನಾನು ಕೇಳಿದ್ದುದು. ಅದನ್ನು ಹೇಗೆ ಮಾಡುತ್ತೀರಿ ಎಂದು.

ಶ್ರೀ ಸಿ.ಎಂ.ಉದಾಸಿ: ಅದನ್ನೇ ಯೋಚನೆ ಮಾಡಿ, ಹೊಸದಾಗಿ ರಸ್ತೆಗಳನ್ನು ಮಾಡಬೇಕಾದಾಗ ಅದಕ್ಕೆ ಒಂದು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗುತ್ತದೆ. ಮತ್ತು ಅದರ ಜೊತೆಗೆ ಅದಕ್ಕೆ ಬೇಕಾಗಿರುವಂತಹ ಸ್ಟಾಂಡರ್ಡ್ ರಸ್ತೆಗಳನ್ನು ಇಲ್ಲಿ ಮಾಡಬೇಕಾಗುತ್ತದೆ.

ಅಧ್ಯಕ್ಷರು: ನೀವು 10-15 ಟನ್‌ಗಳಷ್ಟು ಸೆಪಿಫೈ ಮಾಡಿದರೆ ಅವರು 20 ಟನ್‌ಗಳಷ್ಟು ಲೋಡ್ ಹಾಕಿಕೊಂಡು ವಾಹನ ಓಡಿಸಿದರೆ ರೋಡ್ ಕಂಡೀಷನ್ ಬೇಗ ಹಾಳಾಗುತ್ತದೆ.

ಮಾನ್ಯ ಸದಸ್ಯರು: ಗ್ರಾನೈಟ್ ಕಲ್ಲುಗಳಂತೂ 30-40 ಟನ್‌ಗಳಷ್ಟು ಹಿಡಿಯುತ್ತದೆ.

ಶ್ರೀ ಸಿ.ಎಂ.ಉದಾಸಿ: ಇದರ ಬಗ್ಗೆ ನಾವು ತೀವ್ರವಾಗಿ ಪರಿಗಣಿಸುತ್ತೇವೆ.

ಶ್ರೀ ಹೆಚ್.ಸಿ.ಬಾಲಕೃಷ್ಣ: ನನ್ನ ಕೊನೆಯ ಪ್ರಶ್ನೆಯೇನೆಂದರೆ, ಕನಕಪುರ-ಮಂಗಳೂರು ರಸ್ತೆಯಲ್ಲಿ ಕಲ್ಲನ್ನು ತುಂಬಿಕೊಂಡು ಲಾರಿಗಳು ಹೋಗುತ್ತವೆ, ಆ ರಸ್ತೆಯಲ್ಲಿನ ಸೇತುವೆಗಳು ಬಿದ್ದುಹೋಗಿದ್ದು, ರಸ್ತೆ ಗುಂಡಿಯಾಗಿದೆ. ಮಾನ್ಯ ಅಧ್ಯಕ್ಷರು ಹೇಳಿದಂತೆ ಸುಮಾರು 15-20 ಟನ್‌ಗಳಷ್ಟು ಲೋಡ್ ಹಾಕಿಕೊಂಡು ಹೋಗುತ್ತಿರುವುದರಿಂದ ರಸ್ತೆಗಳು ಹಾಳಾಗಿವೆ. ಆದುದರಿಂದ, ದಯಮಾಡಿ, ಈ ವರ್ಷ ಯಾವುದರಲ್ಲಾದರೂ ಈ ರಸ್ತೆಯ ಅಭಿವೃದ್ಧಿ ಕಾಮಗಾರಿ ತೆಗೆದುಕೊಂಡರೆ ನಮಗೆ ಅನುಕೂಲವಾಗುತ್ತದೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ.ಎಂ.ಉದಾಸಿ: ಈ ವರ್ಷ ಈ ರಸ್ತೆಯ ಕಾಮಗಾರಿ ಕೆಲಸ ತೆಗೆದುಕೊಳ್ಳುವ ಬಗ್ಗೆ ಭರವಸೆ ಕೊಡಬೇಕೆಂದರೆ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕೊಡಬೇಕಾಗುತ್ತದೆ ಆದುದರಿಂದ, ಹಣಕಾಸಿನ ಲಭ್ಯತೆಗನುಗುಣವಾಗಿ ಇದಕ್ಕೆ ಅಗ್ರ ಪ್ರಾಶಸ್ತ್ಯ ನೀಡಲಾಗುವುದೆಂದು ಹೇಳಬಯಸುತ್ತೇನೆ.

ವಿಷಯ: ಹದಗೆಟ್ಟಿರುವ ಹುಬ್ಬಳ್ಳಿ-ಬಾಗಲಕೋಟೆ ಹೆದ್ದಾರಿ ರಸ್ತೆ

521 (4060)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಬಾಗಲಕೋಟೆ ನಡುವಿನ ಹೆದ್ದಾರಿ ರಸ್ತೆಯು ತೀರಾ ಹದಗೆಟ್ಟು ವಾಹನಗಳ ಸಂಚಾರಕ್ಕೆ ಅನಾನುಕೂಲವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ರಸ್ತೆಯನ್ನು ಅಗಲ ಮಾಡುವ ಯೋಜನೆ ಇದೆಯೇ?

ಇ) ಈ ರಸ್ತೆ ಸುಧಾರಣೆಗಾಗಿ ಸರ್ಕಾರವು ಶೀಘ್ರ ಕ್ರಮ ಕೈಕೊಳ್ಳುವರೆ?

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು):

ಅ) ಹುಬ್ಬಳ್ಳಿಯಿಂದ-ಗದ್ದನಕೇರಿ ಕ್ರಾಸ್‌ನ ವರೆಗೆ 116 ಕಿ.ಮೀ. ಇದ್ದು, ಇದರಲ್ಲಿ 50 ಕಿ.ಮೀ. ರಸ್ತೆ 5.5 ಮೀ ಅಗಲವಿದ್ದು, ವಾಹನ ಸಂಚಾರಕ್ಕೆ ತೊಂದರೆ ಇರುವುದಿಲ್ಲ.